ಸಲ ಮುಖ್ಯಮಂತ್ರಿಯೊಬ್ಬರು ಬರ್ತಿದ್ದಾರೆ ಅಂಬೋದನ್ನು ನೀವು ನೆನಪಲ್ಲಿಟ್ಟು ಕೊಳ್‌ಬೇಕು. ಊರು ಒಗ್ಗಟ್ಟಾಗಿದ್ದು ಕಾರ್ಯಕ್ರಮದಲ್ಲಿ ಸಣ್ಣ ಲೋಪವೂ ಆಗದಂತೆ ನೋಡಿಕೊಳ್ಳಬೇಕು ಎಂದು ಉಪದೇಶ ಮಾಡಿ ಹೋಗಿದ್ದರು.

ಮುಖ್ಯಮಂತ್ರಿ ಬರುವ ಡೇಟು ಗೊತ್ತಾದ ಮೇಲೆ ಹೊಸಳ್ಳಿ ಮೈಕೊಡವಿ ಎದ್ದು ನಿಂತಿತು. 'ಇನ್ನು ಇಪ್ಪತ್ತೇ ದಿನಗಳಿವೆ. ಅಷ್ಟರಲ್ಲಿ ಎಲ್ಲ ಆಗಬೇಕು. ಎಷ್ಟೊಂದು ಕೆಲಸಗಳಿವೆ. ಎಲ್ಲವನ್ನೂ ಸರಿಯಾಗಿ ಮಾಡಲು ಆಗುತ್ತೋ ಇಲ್ಲವೋ. ಸಮಾರಂಭ ಹೇಗೆ ಮಾಡಬೇಕು? ಪೆಂಡಾಲು ಎಲ್ಲಿ ಹಾಕಬೇಕು? ಇನ್ವಿಟೇಷನ್ ಕಾರ್ಡ್ ಪ್ರಿಂಟ್ ಮಾಡಿಸಬೇಕು. ಹೈಸ್ಕೂಲು ಆರಂಭಿಸುವಾಗ ಇದ್ದ ಮೇಷ್ಟರುಗಳಲ್ಲಿ ಯಾರ್‍ಯಾರು ಬದುಕಿದ್ದಾರೆ? ಅವರೆಲ್ಲ ಎಲ್ಲೆಲ್ಲಿದ್ದಾರೊ? ಮೊದಲು ಪತ್ತೆ ಮಾಡಬೇಕು. ಎಲ್ಲರನ್ನೂ ಕರೆಸಿ ಸನ್ಮಾನ ಮಾಡಬೇಕು. ವಜ್ರ ಮಹೋತ್ಸವದ ನೆನಪಿನ ಸಂಚಿಕೆ ಆಗಬೇಕು. ಅದಕ್ಕೆ ಯಾರ್‍ಯಾರಿಂದ ಲೇಖನ ಬರೆಸಬೇಕು? ಮುಖ್ಯಮಂತ್ರಿಗಳಿಗೆ ಅರ್ಪಿಸಬೇಕಾದ ಬಿನ್ನವತ್ತಳೆ ಬರೆಯಬೇಕು. ಅದು ಊರ ಸಮಸ್ತರಿಗೆ ಇಷ್ಟವಾಗಬೇಕು. ಮುಖ್ಯಮಂತ್ರಿಗಳು ರಾತ್ರಿ ಇಲ್ಲೇ ತಂಗುವುದಾದರೆ ಯಾರ ಮನೆಯಲ್ಲಿ ಉಳಿತಾರೆ ಅನ್ನೋದು ನಿರ್ಧಾರ ಆಗಬೇಕು. ಅವರ ಊಟದ ವ್ಯವಸ್ಥೆಯನ್ನು ಮಾಡಬೇಕು. ಮುಖ್ಯಮಂತ್ರಿಯ ಊಟವೆಂದರೆ ಸಾಮಾನ್ಯವೇ? ಹೀಗೆ ಹತ್ತೆಂಟು ಪ್ರಶ್ನೆಗಳನ್ನು ಹಾಕಿಕೊಂಡು ಸಾಮೂಹಿಕವಾಗಿ ಉತ್ತರ ಹುಡುಕಲು ಪ್ರಯತ್ನಿಸಿದರು.

'ಇನ್ನೂ ಇಪ್ಪತ್ತ್ ದಿನಗಳಿವೆ. ಶಾಸಕರು, ಸ್ವಾಗತ ಸಮಿತಿಯವರು ಎಲ್ಲವನ್ನೂ ತೀರ್ಮಾನ ಮಾಡ್ತಾರೆ... ನಾವು ಜಾಸ್ತಿ ತಲೆ ಕೆಡಿಸಿಕೊಳ್ಳೊದು ಬೇಡ. ಮೊದಲು ಊರ ಸಮಸ್ಯೆಗಳೇನು ಅಂಬೊದನ್ನು ಪಟ್ಟಿ ಮಾಡಿ ಒಂದು ಬಿನ್ನವತ್ತಳೆ ಪತ್ರ ಬರೆಸಬೇಕು. ಪುರುಷೋತ್ತಮ ಅದನ್ನು ಬರೀತಾನೆ. ಅವನೇ ಓದಿ ಮುಖ್ಯಮಂತ್ರಿಯವರಿಗೆ ಕೊಟ್ಟರೆ ನಮ್ಮ ಕೆಲಸ ಮುಗಿದಂತೆ' ಎಂದು ಮಾತಾಡಿಕೊಂಡರು.

ಮರುದಿನವೇ ದುರ್ಗದಿಂದ ಜಿಲ್ಲಾಧಿಕಾರಿಗಳ ಪರವಾಗಿ ಅಸಿಸ್ಟೆಂಟ್ ಕಮೀಷನರ್ ಸಾಹೇಬರು, ಕಸಬಾ ತಹಸೀಲ್ದಾರರು ಹೊಸಳ್ಳಿಗೆ ಬಂದರು. ಗ್ರಾಮ ಪಂಚಾಯ್ತಿ ಅಧ್ಯಕ್ಷರು ಮತ್ತು ಮೆಂಬರುಗಳೊಂದಿಗೆ ಸಭೆ ಮಾಡಿದರು.

ಸಭೆಯಲ್ಲಿ ಎ.ಸಿ. ಸಾಹೇಬರು ಹೇಳಿದ ವಿಷಯ ಗಾಬರಿ ಹುಟ್ಟಿಸಿತು. 'ಮುಖ್ಯಮಂತ್ರಿಗಳ ಜೀವಕ್ಕೆ ಅಪಾಯವಿದೆ ಅಂತ ಇಂಟೆಲಿಜೆನ್ಸ್ ರಿಪೋರ್ಟ್ ಬಂದಿದೆ! ಅವರಿಗೆ ವಿಶೇಷ ಭದ್ರತೆ ಒದಗಿಸಬೇಕಾಗುತ್ತೆ. ಹೊಸಳ್ಳಿಯಿಂದ ಹತ್ತನ್ನೆರಡು ಕಿಲೊಮೀಟರು ದೂರದಲ್ಲಿರೊ ಖಂಡೇನಹಳ್ಳಿ ಕಾವಲು ದಾಟಿದರೆ ಪಕ್ಕದ ರಾಜ್ಯದ ಗಡಿ ಶುರುವಾಗುತ್ತೆ. ಅಪಾಯ ಅಲ್ಲಿಂದಲೇ ಬರಬಹುದು ಅಥವಾ ಬರದೇ ಇರಬಹುದು. ಏನೂ ಆಗಲ್ಲ ಅಂತ ನಾವು ಸುಮ್ಮನೆ ಇರಕಾಗಲ್ಲ. ಮುನ್ನೆಚ್ಚರಿಕೆ ಕ್ರಮಗಳನ್ನು ತಗೋಬೇಕಾಗುತ್ತೆ. ಮುಖ್ಯಮಂತ್ರಿಗಳು ಬಂದು ಹೋಗೊವರೆಗೆ ಹೊಸಳ್ಳಿಗೆ ಯಾರೇ ಅಪರಿಚಿತರು ಬಂದರೂ ನೀವು ತಡ ಮಾಡದೆ ಪೊಲೀಸರಿಗೆ ತಿಳಿಸಬೇಕು. ಮುಖ್ಯಮಂತ್ರಿಗಳು ಇಲ್ಲಿ ಒಂದು ರಾತ್ರಿ ತಂಗುವುದಾದರೆ ಅದಕ್ಕೆ ಏನೇನು ಸಿದ್ಧತೆ ಮಾಡಿಕೊಳ್ಳಬೇಕು ಅನ್ನೋದನ್ನು ಡೀಸಿ, ಎಸ್.ಪಿ.ಯವರು ಹೇಳ್ತಾರೆ. ಮುಖ್ಯಮಂತ್ರಿ ಯಾರ ಮನೆಯಲ್ಲಿ ಉಳೀತಾರೆ ಅನ್ನೋದನ್ನೂ ಡೀಸಿಯವರೇ ಡಿಸೈಡ್ ಮಾಡ್ತಾರೆ... ಒಟ್ಟಿನಲ್ಲಿ ಎಲ್ಲದಕ್ಕೂ ನಿಮ್ಮ ಸಹಕಾರ ಬೇಕು' ಎಂದು ಹೇಳಿ ಹೋದ ಮೇಲೆ ಹೊಸಳ್ಳಿ ಒಂದೆರಡು ದಿನ ಅಕ್ಷರಶಃ ನಿದ್ದೆ ಕೆಡಿಸಿಕೊಂಡಿತು.

'ಮುಖ್ಯಮಂತ್ರಿಯವರ ರಕ್ಷಣೆಗೆ ಬೇಕಾದಷ್ಟು ಪೊಲೀಸರು ಇರ್ತಾರೆ... ಅವರು ಹೊಸಳ್ಳಿಯಲ್ಲಿರೊ ತನಕ ನಾವೇ ಅವರನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತೇವೆ' ಎಂದು ಕೆಲವರು ತಮಗೆ ತೋಚಿದ ಹಾಗೆ ಮಾತಾಡಿಕೊಂಡರು.